# ಭೂಚೇತನ ಯೋಜನೆ

ರಾಜ್ಯದ ಪ್ರತಿಶತ 70 ರಷ್ಟು ಸಾಗುವಳಿ ಪ್ರದೇಶ ಮಳೆಯಾಶ್ರಿತ ಪ್ರದೇಶವಾಗಿದ್ದು, ಕೃಷಿ ಉತ್ಪಾದನೆಯ ಗಣನೀಯ ಪಾಲು ಖುಷ್ಕಿ ಪ್ರದೇಶದಿಂದಾಗುತ್ತಿದೆ. ಮಳೆಯಾಶ್ರಿತ ಪ್ರದೇಶವು ರಾಜ್ಯದ ಆಹಾರೋತ್ಪಾದನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಈ ಹಿನ್ನೆಲೆಯಲ್ಲಿ, ಮಳೆ ಆಶ್ರಿತ ಬೆಳೆಗಳ ಉತ್ಪಾದಕತೆಯನ್ನು ಕನಿಷ್ಠ ಶೇ. 20 ರಷ್ಟು ಹೆಚ್ಚಿಸುವುದರೊಂದಿಗೆ ರೈತರ ಆರ್ಥಿಕ ಮಟ್ಟ ಹಾಗೂ ಜೀವನವನ್ನು ಉತ್ತಮಗೊಳಿಸಲು ಕರ್ನಾಟಕ ರಾಜ್ಯ ಸರ್ಕಾರವು "ಭೂಚೇತನ" ಎಂಬ ವಿಶಿಷ್ಟ ಯೋಜನೆಯನ್ನು 2009–10 ರಿಂದ 2012–13ನೇ ಸಾಲಿನವರೆಗೆ ಹಮ್ಮಿಕೊಂಡಿದೆ.

ICRISAT ಸಂಸ್ಥೆ ಹೈದರಾಬಾದ ಇವರು ಯೋಜನೆಯ ತಾಂತ್ರಿಕ ಸಲಹೆಗಾರರಾಗಿದ್ದು, ಕೃಷಿ ವಿಶ್ವವಿದ್ಯಾನಿಲಯ ಹಾಗೂ ಜಲಾನಯನ ಇಲಾಖೆಯವರು ಪಾಲುದಾರರಾಗಿರುತ್ತಾರೆ. ಮಣ್ಣು ಪರೀಕ್ಷೆ ಆಧಾರಿತ ಪೋಷಕಾಂಶಗಳ ನಿರ್ವಹಣೆ ಈ ಯೋಜನೆಯ ಪ್ರಮುಖ ಅಂಶವಾಗಿರುತ್ತದೆ. ಅದರಂತೆ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮಣ್ಣು ಪರೀಕ್ಷೆಯನ್ನು ಕೈಗೊಳ್ಳಲಾಗಿದ್ದು, ಸಾಮಾನ್ಯವಾಗಿ ಎಲ್ಲಾ ಪ್ರದೇಶಗಳಲ್ಲಿ ಗಂಧಕ ಮತ್ತು ಲಘುಪೋಷಕಾಂಶಗಳಾದ ಸತು ಮತ್ತು ಬೋರಾನ್‌ಗಳ ವ್ಯಾಪಕ ಕೊರತೆ ಕಂಡುಬಂದಿರುತ್ತದೆ. ಯೋಜನೆಯಡಿ ರೈತರ ಕೌಶಲ್ಯ ಮತ್ತು ಸಾಮರ್ಥ್ಯ ವೃದ್ಧಿಗೆ ಜಿಲ್ಲಾ ಹಂತದಿಂದ ಗ್ರಾಮ ಮಟ್ಟದವರೆಗೆ ತರಬೇತಿಗಳು ಮತ್ತು ತಾಂತ್ರಿಕತೆಗಳ ಅಳವಡಿಕೆಗೆ ಪೂರಕವಾಗಿ ಬಿತ್ತನೆ ಬೀಜ, ಜಿಪ್ಸಂ, ಲಘುಪೋಷಕಾಂಶ, ಜೈವಿಕಗೊಬ್ಬರ, ಮತ್ತಿತರ ಅವಶ್ಯಕ ಪರಿಕರಗಳನ್ನು ಶೇ.50 ರಿಯಾಯಿತಿ ದರದಲ್ಲಿ ಗುಚ್ಛ ಗ್ರಾಮ ಮಟ್ಟದಲ್ಲಿ ಒದಗಿಸಲಾಗುತ್ತಿದೆ. ಭೂಚೇತನ ಯೋಜನೆಯಡಿ ಮುಖ್ಯವಾಗಿ ತಾಂತ್ರಿಕತೆಗಳನ್ನು ರೈತರಿಗೆ ತಲುಪಿಸಲು ಪ್ರತಿ 500 ಹೆಕ್ಟೇರುಗಳಿಗೆ ಒಬ್ಬ ರೈತ ಅನುವುಗಾರ ಸೇವೆಯನ್ನು ಬಳಸಿಕೊಳ್ಳಲಾಗುತ್ತಿದೆ. ಈ ರೈತ ಅನುವುಗಾರರಿಗೆ ಜಿಲ್ಲಾ ಕೃಷಿ ತರಬೇತಿ ಕೇಂದ್ರ ಹಾಗೂ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಆರು ದಿನಗಳ ಸಾಂಸ್ಥಿಕ ತರಬೇತಿಗಳನ್ನು ನೀಡಲಾಗಿದೆ. 2012–13ನೇ ಸಾಲಿನಲ್ಲಿ ರೈತ ಅನುವುಗಾರರ ಸೇವೆಯನ್ನು ಬಳಸಿಕೊಂಡು ಪ್ರತಿ ರೈತ ಅನುವುಗಾರರಿಗೆ ಒಂದರಂತೆ ರೈತ ಕ್ಷೇತ್ರ ಪಾಠಶಾಲೆಗಳನ್ನು ಅನುಷ್ಠಾನಗೊಳಿಸಲಾಗುತ್ತದೆ. ಯೋಜನೆಯ ಪ್ರಚಾರಕ್ಕಾಗಿ ಗೋಡೆ ಬರಹ ಒಳಗೊಂಡಂತೆ ವ್ಯಾಪಕ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಪ್ರಾರಂಭಿಕ ವರ್ಷ 2009–10ರ ಮುಂಗಾರಿನಲ್ಲಿ ಭೂಚೇತನ ಯೋಜನೆಯನ್ನು ಆರು ಜಿಲ್ಲೆಗಳ (ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ಹಾವೇರಿ ಮತ್ತು ಧಾರವಾಡ) 2.25 ಲಕ್ಷ ಹೆ. ಪ್ರದೇಶದಲ್ಲಿ ವಿವಿಧ ಖುಷ್ಕಿ ಬೆಳೆಗಳಲ್ಲಿ ಅನುಷ್ಠಾನಗೊಳಿಸಿ ಇಳುವರಿಯಲ್ಲಿ ಸರಾಸರಿ ಪ್ರತಿಶತ 32 ರಿಂದ 60 ಹೆಚ್ಚಳವನ್ನು ಸಾಧಿಸಲಾಯಿತು. ಸುಮಾರು 2.00 ಲಕ್ಷ ರೈತರು ಯೋಜನೆಯ ಪ್ರಯೋಜನ ಪಡೆದಿರುತ್ತಾರೆ.

2010–11 ಸಾಲಿನಲ್ಲಿ ಭೂಚೇತನ ಯೋಜನೆಯನ್ನು ರಾಜ್ಯದ 16 ಜಿಲ್ಲೆಗಳಲ್ಲಿ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ಹಾವೇರಿ, ಧಾರವಾಡ ಬೀದರ್, ಗುಲ್ಬರ್ಗಾ, ಯಾದಗಿರ, ರಾಯಚೂರು, ಗದಗ, ದಾವಣಗೆರೆ, ಚಾಮರಾಜನಗರ, ಬಿಜಾಪುರ, ಬೆಂಗಳೂರು(ಗ್ರಾ) ಮತ್ತು ಹಾಸನ ಜಿಲ್ಲೆಗಳಲ್ಲಿ ಒಟ್ಟು 12.00 ಲಕ್ಷ ಹೆ. ಪ್ರದೇಶದಲ್ಲಿ ಅನುಷ್ಠಾನಗೊಳಿಸಲಾಗಿದ್ದು, ಇಳುವರಿಯಲ್ಲಿ ಸರಾಸರಿ 30 ರಿಂದ 45 ಹೆಚ್ಚಳವನ್ನು ಸಾಧಿಸಲಾಯಿತು. 2010–11ರಲ್ಲಿ 5030 ಗ್ರಾಮಗಳ ಸುಮಾರು 8.00 ಲಕ್ಷ ರೈತರು ಯೋಜನೆಯ ಪ್ರಯೋಜನ ಪಡೆದಿರುತ್ತಾರೆ. 2009–10 ಹಾಗೂ 2010–11ರಲ್ಲಿ ಹಿಂಗಾರು ಹಂಗಾಮಿನಲ್ಲಿಯೂ ಕ್ರಮವಾಗಿ 0.59 ಮತ್ತು 3.3ಲಕ್ಷ ಹೆಕ್ಟೇರುಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

2011–12ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳ ಒಟ್ಟು 25.39 ಲಕ್ಷ ಹೆ.ಪ್ರದೇಶದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಹಿಂಗಾರು ಹಂಗಾಮಿನಲ್ಲಿ ಯೋಜನೆಯನ್ನು 5.40 ಲಕ್ಷ ಹೆ. ಪ್ರದೇಶದಲ್ಲಿ ಅನುಷ್ಠಾನಗೊಳಿಸಲಾಗಿದೆ. ಸದರಿ ಸಾಲಿನಲ್ಲಿ 13800 ಗ್ರಾಮಗಳಲ್ಲಿ ಒಟ್ಟು 20 ಲಕ್ಷ ರೈತರು ಈ ಯೋಜನೆಯ ಲಾಭ ಪಡೆದಿರುತ್ತಾರೆ. ಸುಧಾರಿತ ನಿರ್ವಹಣೆ ಪದ್ದತಿಯ ಅಳವಡಿಕೆಯಿಂದ ಇಳುವರಿಯಲ್ಲಿ ಸರಾಸರಿ ಪ್ರತಿಶತ 21 ರಿಂದ 43 ಹೆಚ್ಚಳವನ್ನು ಸಾಧಿಸಲಾಗಿದೆ.

ಭೂಚೇತನ ಯೋಜನೆಯನ್ನು 2012–13ನೇ ಸಾಲಿನ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಒಟ್ಟು 50.00 ಲಕ್ಷ ಹೆ.ಪ್ರದೇಶದಲ್ಲಿ ಮುಂಗಾರಿನಲ್ಲಿ 42 ಲಕ್ಷ ರೈತರನ್ನು ಈ ಯೋಜನೆಯಡಿ ನೋಂದಣಿ ಮಾಡಲಾಗಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ಪ್ರಸಕ್ತ ಸಾಲಿನ ಮುಂಗಾರಿನಲ್ಲಿ ಸುಮಾರು 9700 ರೈತ ಅನುವುಗಾರರ ಸೇವೆಯನ್ನು ಬಳಸಿಕೊಳ್ಳಲಾಗಿದೆ. ಯೋಜನೆಯ ತಾಂತ್ರಿಕತೆಗಳಿಗೆ ಪೂರಕವಾಗಿ ಬೇಕಾಗುವ ಲಘು ಪೋಷಕಾಂಶ, ಜಿಪ್ಸಂ, ಜೈವಿಕಗೊಬ್ಬರ ಮುಂತಾದ ಪರಿಕರಗಳನ್ನು ರೈತರಿಗೆ ಶೇಕಡ 50 ರಿಯಾಯತಿ ದರದಲ್ಲಿ ಅವರ ಗ್ರಾಮಗಳಿಗೆ ಸಮೀಪದಲ್ಲಿ ದೊರೆಯುವಂತೆ 747 ರೈತ ಸಂಪರ್ಕ ಕೇಂದ್ರಗಳಲ್ಲದೇ, 5000 ಗುಚ್ಛ ಗ್ರಾಮ ದಾಸ್ತಾನುಗಳನ್ನು ಗುರುತಿಸಿ, ಪರಿಕರಗಳನ್ನು ದಾಸ್ತಾನು ಮಾಡಿ ವಿತರಿಸಲಾಗಿದೆ. ತಾಂತ್ರಿಕತೆಗಳನ್ನು ಪದ್ಧತಿ ಪ್ರಾತ್ಯಕ್ಷಿಕೆ ಮುಖಾಂತರ ರೈತರಿಗೆ ತಲುಪಿಸಲು 8900 ರೈತ ಕ್ಷೇತ್ರ ಪಾಠಶಾಲೆಗಳನ್ನು ಏರ್ಪಡಿಸಲಾಗಿದೆ. ಪ್ರಸಕ್ತ ಹಂಗಾಮಿನ ಖುಷ್ಕಿ ಪ್ರದೇಶದ ಮುಂಗಾರು ಗುರಿ 50.00 ಲಕ್ಷ ಹೆಕ್ಟೇರುಗಳಾಗಿದ್ದು ಒಟ್ಟು 37.00 ಲಕ್ಷ ಹೆಕ್ಟೇರುಗಳಲ್ಲಿ ಬಿತ್ತನೆಯಾಗಿರುತ್ತದೆ.

ಅಲ್ಲದೇ ಇದೇ ಮಾದರಿಯನ್ನು ನೀರಾವರಿ ಭತ್ತ ಮತ್ತು ಕಬ್ಬು ಬೆಳೆಗಳಲ್ಲಿ 5.0ಲಕ್ಷ ಹೆಕ್ಟೇರುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಮುಂಗಾರಿನಲ್ಲಿ ಮಳೆ ಅಭಾವದಿಂದ ಬಿತ್ತನೆ ಪ್ರದೇಶ ಕಡಿಮೆಯಾಗಿದ್ದು, ಈ ಪ್ರದೇಶವನ್ನು ಒಳಗೊಂಡಂತೆ, ಹಿಂಗಾರಿನಲ್ಲಿ ರಾಜ್ಯದ 21 ಜಿಲ್ಲೆಗಳ 27.00 ಲಕ್ಷ ಹೆಕ್ಟೇರುಗಳಲ್ಲಿ ಭೂಚೇತನ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

ಭೂಚೇತನ ಯೋಜನೆಯ ಫಲಿತಾಂಶದಿಂದ ಪ್ರೇರಿತವಾಗಿ ಈ ಯೋಜನೆಯನ್ನು ಬಲಪಡಿಸಿ ಮುಂದುವರೆಸಲು ಎರಡನೆಯ ಹಂತದ (2013–17) ಪ್ರಸ್ತಾವನೆಗೆ ಅನುಮೋದನೆ ನೀಡಲಾಗಿದೆ. ಖಅಖಖಖಂಖಿ ಸಂಸ್ಥೆ ಹೈದರಾಬಾದ ಇವರು ಯೋಜನೆಯ ತಾಂತ್ರಿಕ ಸಲಹೆಗಾರರಾಗಿರುತ್ತಾರೆ.

ಭೂಚೇತನ ಯೋಜನೆಯ ಎರಡನೆ ಹಂತದ ಉದ್ದೇಶಗಳು :

- ಐದು ವರ್ಷಗಳಲ್ಲಿ ಕೃಷಿ ಉತ್ಪಾದನೆಯನ್ನು ಈಗಿನ ಹಂತದಿಂದ ಶೇ. 20ರಷ್ಟು ಹೆಚ್ಚಿಸುವ ಗುರಿ ಹೊಂದಲಾಗಿದೆ.
- 2013– 14 ನೇ ಸಾಲಿನಲ್ಲಿ 50 ಲಕ್ಷ ಹೆಕ್ಟೇರ್ ಖುಷ್ಕಿ ಪ್ರದೇಶದೊಂದಿಗೆ ಈ ಯೋಜನೆಯನ್ನು ನೀರಾವರಿ ಭತ್ತ ಮತ್ತು ಕಬ್ಬಿನ ಬೆಳೆಗಳ 8 ಲಕ್ಷ ಹೆ ವಿಸ್ತೀರ್ಣದಲ್ಲಿ ಅನುಷ್ಠಾನಗೊಳಿಸುವುದು.
- ಪ್ರಸಕ್ತ ಸನ್ನಿವೇಶದಲ್ಲಿ ಆಗುತ್ತಿರುವ ಹವಾಮಾನ ಬದಲಾವಣೆಗಳನ್ನು ವಿಶ್ಲೇಷಿಸಿ ತಾಂತ್ರಿಕತೆಗಳನ್ನು ಬಲಪಡಿಸುವುದು.
- ರೈತರಿಗೆ ಉತ್ತಮ ಗುಣಮಟ್ಟದ ಬೀಜಗಳು ದೊರೆಯುವಂತೆ ಗ್ರಾಮ ಮಟ್ಟದಿಂದ ಕಾರ್ಯಕ್ರಮಗಳನ್ನು ರೂಪಿಸುವುದು.
- ಯೋಜನೆಯಲ್ಲಿ ಪಾಲ್ಗೊಳ್ಳುವ ಸಂಸ್ಥೆಗಳ, ವಿಸ್ತರಣಾ ಅಧಿಕಾರಿಗಳ ಹಾಗೂ ರೈತರ ಸಾಮರ್ಥ್ಯವನ್ನು ಹೆಚ್ಚಿಸುವುದು

2013–14 ನೇ ಸಾಲಿನಲ್ಲಿ ಭೂಚೇತನ ಯೋಜನೆಯಲ್ಲಿ ಮುಂಗಾರು ಹಂಗಾಮಿನಲ್ಲಿ ಸಾಧಿಸಿದ ಪ್ರಗತಿ :

- ಈ ಯೋಜನೆಯಲ್ಲಿ ಇಲ್ಲಿಯವರೆಗೆ 52.00 ಲಕ್ಷ ಹೆ. ಪ್ರದೇಶದಲ್ಲಿ ಬಿತ್ತನೆಯಾಗಿದ್ದು , ಒಟ್ಟು 9700 ರೈತ ಅನುವುಗಾರರ ಸೇವೆಯನ್ನು ಬಳಸಿಕೊಳ್ಳಲಾಗುತ್ತಿದೆ.
- ಅವಶ್ಯಕ ಪರಿಕರಗಳನ್ನು ಶೇ.50 ರಿಯಾಯಿತಿ ದರದಲ್ಲಿ ಗುಚ್ಛ ಗ್ರಾಮ ಮಟ್ಟದಲ್ಲಿ 4081 ಗೋದಾಮುಗಳಲ್ಲಿ ವಿತರಿಸಲಾಗುತ್ತಿದೆ.
- ಒಟ್ಟು 8923 ರೈತ ಕ್ಷೇತ್ರ ಪಾಠಶಾಲೆಗಳನ್ನು ಪ್ರಾರಂಭಿಸಲಾಗಿದೆ..
- ರೈತರ ಕೌಶಲ್ಯ ಮತ್ತು ಸಾಮರ್ಥ್ಯ ವೃದ್ಧಿಗೆ ವಿವಿಧ ಹಂತಗಳಲ್ಲಿ ತರಬೇತಿಗಳನ್ನು ನಡೆಸಲಾಗಿತ್ತಿದ್ದು ,ಜಿಲ್ಲಾ ಮಟ್ಟದಲ್ಲಿ 30 ತರಬೇತಿ, ತಾಲ್ಲೂಕು ಮಟ್ಟದಲ್ಲಿ 173 ತರಬೇತಿ, ಹೋಬಳಿ ಮಟ್ಟದಲ್ಲಿ 725 ತರಬೇತಿ ಹಾಗೂ ಗುಚ್ಛ ಗ್ರಾಮ ಮಟ್ಟದಲ್ಲಿ 7336 ತರಬೇತಿಗಳನ್ನು ನಡೆಸಲಾಗಿದೆ. ಒಟ್ಟು 9230 ರೈತ ಅನುವುಗಾರರಿಗೆ ಜಿಲ್ಲಾ ಕೃಷಿ ತರಬೇತಿ ಕೇಂದ್ರ ಹಾಗೂ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಐದು ದಿನಗಳ ಸಾಂಸ್ಥಿಕ ತರಬೇತಿಗಳನ್ನು ನೀಡಲಾಗಿದೆ.
- ಯೋಜನೆಯ ಪ್ರಚಾರಕ್ಕಾಗಿ 10000 ಗೋಡೆ ಬರಹ ಒಳಗೊಂಡಂತೆ ವ್ಯಾಪಕ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.
- ಈ ಯೋಜನೆಯಡಿ 89730 ಟನ್ ಜಿಪ್ಸಂ, 10555 ಟನ್ ಝಿಂಕ್ ಹಾಗೂ 3312 ಟನ್ ಬೋರನ್ ಕೃಷಿ ಪರಿಕರಗಳನ್ನು ವಿತರಿಸಲಾಗಿದೆ.